ಪರಿಶಿಷ್ಟ ಜಾತಿ:ಪಂಗಡದವರ ಮನೆಗಳಿಗೆ ಶೌಚಾಲಯ ನಿರ್ಮಿಸುವುದು

79 (12): ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಎಲ್ಲಾ ಮನೆಗಳಿಗೆ ಶೌಚಾಲಯ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೇ;

ಆ) ಇಲ್ಲದಿದ್ದರೆ ಅದನ್ನು ಜಾರಿಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಪರಿಶಿಷ್ಟ ಜಾತಿ / ಪಂಗಡಗಳು ಸೇರಿದಂತೆ ಗ್ರಾಮೀಣ ಪ್ರದೇಶಗಳ ಎಲ್ಲಾ ವರ್ಗದ ಜನತೆಗೆ ಕೌಟುಂಬಿಕ ಶೌಚಾಲಯಗಳನ್ನು ಒದಗಿಸುವುದು ಸರ್ಕಾರದ ಉದ್ದೇಶವಾಗಿದೆ.

ಆ) ಕೇಂದ್ರ ಪುರಸ್ಕೃತ ಸಂಪೂರ್ಣ ನೈರ್ಮಲ್ಯ ಆಂದೋಲನ ಕಾರ್ಯಕ್ರಮದಡಿ ಈ ಸಲುವಾಗಿ ರೂ. 381.32 ಕೋಟಿ ಅಂದಾಜಿನ ಒಂದು ಸಮಗ್ರ ಯೋಜನೆಯನ್ನು ರೂಪಿಸಿ ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. ಈ ಪೈಕಿ, ರಾಜ್ಯದ 15 ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭಿಸುವ ಮುನ್ನ ಕೈಗೊಳ್ಳಬೇಕಾದ ಸರ್ವೆ / ಅರಿವು ಮೂಡಿಸುವ ಕಾರ್ಯಕ್ರಮದ ಸಲುವಾಗಿ ಈಗಾಗಲೇ ಕೇಂದ್ರ ಸರ್ಕಾರ ಸಹಮತಿ ನೀಡಿದ್ದು, ಈಗಾಗಲೇ 7 ಜಿಲ್ಲೆಗಳಿಗೆ ತಲಾ ರೂ. 10.00 ಲಕ್ಷದಂತೆ ರಾಜ್ಯಕ್ಕೆ ಅನುದಾನ ಬಿಡುಗಡೆ ಮಾಡಿದೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳವರ ಪರವಾಗಿ) : ಅಧ್ಯಕ್ಷರೆ, ಈ ಪ್ರಶ್ನೆ ಕುರಿತಾದ ಉತ್ತರದ ಫೈಲನ್ನು ನಾನು ವಾಪಸ್ಸು ಕಳುಹಿಸಿಕೊಟ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಿರಿಯ ಸಚಿವರಾದ ಎಂ.ಪಿ. ಪ್ರಕಾಶ್‌ರವರು ಸರ್ಕಸ್ ಮಾಡುತ್ತಿದ್ದಾರೆ. ಎಲ್ಲಾ ಸದಸ್ಯರಿಗೂ ತಕ್ಕ ಉತ್ತರ ಕೊಡುತ್ತಿದ್ದಾರೆ. ಮಂತ್ರಿಮಂಡಲಕ್ಕೆ 32 ಸಚಿವರ ಅಗತ್ಯವಿಲ್ಲ! ತಾವೇ ಮ್ಯಾನೇಜ್ ಮಾಡಬಹುದು. ಈಗ ಮಂತ್ರಿಮಂಡಲ ವಿಸ್ತರಣೆಯ ಅಗತ್ಯವಿಲ್ಲ!

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳಿಗೆ ಈ ದಿವಸವೇ ಎಲ್ಲಾ ಪ್ರಶ್ನೆಗಳು ಬಂದಿರುವುದರಿಂದ, ಅದಕ್ಕೋಸ್ಕರ ಈ ರೀತಿ ಆಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಎಲ್ಲಾ ಖಾತೆಗಳೂ ಸಹ ಅವರ ಹತ್ತಿರವೇ ಇದೆ. ಮುಖ್ಯಮಂತ್ರಿಗಳಿಗೆ ಹೋಗದೆ ಇನ್ನೆಲ್ಲಿಗೆ ಹೋಗುತ್ತದೆ?

ಶ್ರೀ ಕೆ.ಎಸ್. ಈಶ್ವರಪ್ಪ : ಇಡೀ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳೂ ಸೇರಿದಂತೆ ಎಲ್ಲಾ ವರ್ಗಗಳ ಜನರಿಗೆ ಕೌಟುಂಬಿಕ ಶೌಚಾಲಯಗಳನ್ನು ಒದಗಿಸಿಕೊಡುವ ಬಗ್ಗೆ ಸರ್ಕಾರಕ್ಕೆ ನಾನು ಪ್ರಶ್ನೆ ಕೇಳಿದ್ದೆ. ರಾಜ್ಯ ಸರ್ಕಾರ ಬಹಳ ಸ್ಪಷ್ಟವಾಗಿ ತನಗೇನೂ ಸಂಬಂಧವಿಲ್ಲವೆನ್ನುವ ರೀತಿಯಲ್ಲಿ ಉತ್ತರ ಕೊಡುತ್ತಿದೆ. 381 ಕೋಟಿ ರೂಪಾಯಿಗಳಷ್ಟು ಅಂದಾಜಿನ

ಸಮಗ್ರ ಯೋಜನೆಯನ್ನು ನಾವು ಭಾರತ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದರಲ್ಲಿ ಕೇಂದ್ರ ಸರ್ಕಾರದವರು 15 ಜಿಲ್ಲೆಗಳಲ್ಲಿ ಸರ್ವೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಹಾಗಾದರೆ, 15 ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳ ಗತಿ ಏನು? ಎರಡನೆಯದಾಗಿ, ಏಳು ಜಿಲ್ಲೆಗಳಿಗೆ ತಲಾ 10 ಲಕ್ಷ ರೂಪಾಯಿಗಳಂತೆ ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ಅನುದಾನ ಬಂದಿದೆಯೆಂದು ತಾವು ಹೇಳುತ್ತಿದ್ದೀರಿ. ಅಂದರೆ, 381 ಕೋಟಿ ರೂಪಾಯಿಗಳಿಗೆ ಕೇವಲ 70 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ನಾನು ಕೇಳುವುದಿಷ್ಟೆ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಯಾವತ್ತು ಈ ಅನುದಾನ ಬರುತ್ತದೆಂದು ನನಗೆ ಗೊತ್ತಿಲ್ಲ. ಅಲ್ಲಿಯ ತನಕ ಈ ಯೋಜನೆಯನ್ನು ಜಾರಿಗೆ ತರಲು ರಾಜ್ಯ ಸರ್ಕಾರ ಹಣವನ್ನು ಬಿಡುಗಡೆ ಮಾಡುತ್ತದೆಯೇ? 15 ಜಿಲ್ಲೆಗಳಲ್ಲಿ ಮಾತ್ರ ಈ ಕಾರ್ಯಕ್ರಮದ ಬಗ್ಗೆ ಸರ್ವೆ ಮಾಡಿ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ. ಈ 15 ಜಿಲ್ಲೆಗಳಾವುವು? ಉಳಿದ ಜಿಲ್ಲೆಗಳಿಗೆ ಏನು ಮಾಡುತ್ತೀರಿ? ಏಳು ಜಿಲ್ಲೆಗಳಿಗೆ ಮಾತ್ರ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ, ಆ ಜಿಲ್ಲೆಗಳಾವುವು? ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಹಿಂದೆ 'ನಿರ್ಮಲ ಕರ್ನಾಟಕ' ಯೋಜನೆಯಡಿಯಲ್ಲಿ ಬಡತನ ಸೀಮಾ ರೇಖೆಗಿಂತ ಕೆಳಗಿರುವವರಿಗೆ ಎರಡು ಸಾವಿರ ರೂಪಾಯಿಗಳು, ಬಡತನ ಸೀಮಾ ರೇಖೆಗಿಂತ ಮೇಲಿರುವವರಿಗೆ ಹನ್ನೆರಡು ನೂರು ರೂಪಾಯಿಗಳ ಸಬ್ಸಿಡಿ ಕೊಡುವ ಒಂದು ಯೋಜನೆ ಇತ್ತು. ಇದುವರೆಗೆ ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ 1,258 ಲಕ್ಷ ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಟುಂಬಗಳಿಗೆ ಕೌಟುಂಬಿಕ ಶೌಚಾಲಯದ ವ್ಯವಸ್ಥೆ ಕಲ್ಪಿಸಿಕೊಡಲಾಗಿದೆ. ಇನ್ನು ಸುಮಾರು 47,092 ಕುಟುಂಬಗಳಿಗೆ ಸದರಿ ಸೌಲಭ್ಯ ಒದಗಿಸಿಕೊಡಬೇಕಾಗುತ್ತದೆ. ಇದಕ್ಕೆ ಹಣ ಕೊಟ್ಟಿರುವುದೇನಿದೆ, 24 ಜಿಲ್ಲೆಗಳಲ್ಲಿ ವಲಯ ಸುಧಾರಣಾ ಜಿಲ್ಲೆಗಳಾಗಿರುವ ಬಳ್ಳಾರಿ, ಮಂಗಳೂರು ಮತ್ತು ಮೈಸೂರು ಜಿಲ್ಲೆಗಳಿಗೆ ಕುಡಿಯುವ ನೀರಿಗೆ ವಿಶೇಷ ಅನುದಾನವಾಗಿ ನಲವತ್ತು ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದೇವೆ. 381.32 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಸಿದ್ಧಪಡಿಸಿದ ಯೋಜನೆಯ ಪ್ರಸ್ತಾವನೆಯೊಂದನ್ನು ಭಾರತ ಸರ್ಕಾರಕ್ಕೆ ಈಗಾಗಲೇ ಕಳುಹಿಸಿಕೊಟ್ಟಿದ್ದೇವೆ. ತಾವು ಕೇಳಿರುವಂತೆ, 15 ಜಿಲ್ಲೆಗಳಲ್ಲಿ ಶೌಚ ವ್ಯವಸ್ಥೆ ಕುರಿತು ಅರಿವು ಮೂಡಿಸುವ ಚಟುವಟಿಕೆಗಳಿಗೆ ಹೆಚ್ಚು ಹಣ ಒದಗಿಸಿಕೊಡಬೇಕೆಂದು ಕೇಂದ್ರ ಸರ್ಕಾರ ತನ್ನ ಮಾರ್ಗಸೂಚಿಯಲ್ಲಿ ತಿಳಿಸಿದೆ. ಕೋಲಾರ, ಮಂಡ್ಯ, ತುಮಕೂರು, ಚಿಕ್ಕಮಗಳೂರು, ಗುಲ್ಬರ್ಗಾ, ರಾಯಚೂರು ಮತ್ತು ಬೆಂಗಳೂರು, ಈ ಏಳು ಜಿಲ್ಲೆಗಳಲ್ಲಿ ಶೌಚದ ಕುರಿತು ಅರಿವು ಮೂಡಿಸುವ ಸಲುವಾಗಿ ಶೌಚಾಲಯಗಳನ್ನು ನಿರ್ಮಿಸಬೇಕು ಮತ್ತು ನಿರ್ಮಿಸಿರುವ ಶೌಚಾಲಯಗಳನ್ನು ಅನ್ಯ ಕಾರಣಗಳಿಗೆ ಉಪಯೋಗಿಸದೆ ಶೌಚದ ಉದ್ದೇಶಕ್ಕಾಗಿಯೇ ಉಪಯೋಗಿಸಬೇಕು. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಬಳ್ಳಾರಿ ಜಿಲ್ಲೆಯಲ್ಲಿ ಶೌಚಾಲಯಗಳನ್ನು ನಿರ್ಮಿಸಲು ವ್ಯಾಪಕವಾಗಿ ಧನ ಸಹಾಯ ಮಾಡುವಂತಹ ಸನ್ನಿವೇಶದಲ್ಲಿ ಅದರ ಉಪಯೋಗ ಏನಾಗಿದೆಯೆಂದರೆ, ಕನ್ನಡ ವಿಶ್ವವಿದ್ಯಾನಿಲಯದ ಭಾಷಾ ನಿಕಾಯದ ಮೂಲಕ ನಡೆಸಿದ ಸಮೀಕ್ಷೆಯಲ್ಲಿ ಶೇಕಡ 10ರಷ್ಟು ಶೌಚಾಲಯಗಳೂ ಸಹ ಇರಲಿಲ್ಲವೆಂಬ ವರದಿ ಬಂತು! ಅಂದರೆ, ಹಣ ಉಪಯೋಗಿಸಿಕೊಂಡಿದ್ದರೆ,

ಶೌಚಾಲಯ ಮಾಯವಾಗಿತ್ತು! ಉಳಿದಂತೆ ಶೇಕಡ 50ರಲ್ಲಿ, ಶೇಕಡ 60ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ನಿರ್ಮಿಸಿಕೊಟ್ಟಂಥ ಶೌಚಾಲಯಗಳನ್ನು ಶೌಚದ ಉದ್ದೇಶಕ್ಕಾಗಿ ಉಪಯೋಗಿಸದೆ ಸ್ನಾನ ಮಾಡುವಂತಹ ಅಥವಾ ಅದನ್ನು ಸ್ಟೋರ್ ರೂಮ್ ಆಗಿ ಪರಿವರ್ತಿಸಿಕೊಂಡು ಉಪಯೋಗಿಸುತ್ತಿದ್ದಾರೆ! ಇಂತಹವರಿಗೆ ಶೌಚದ ಕುರಿತು ಅರಿವು ಮೂಡಿಸುವ ಅಗತ್ಯವಿದೆ ಎನ್ನುವ ಕಾರಣಕ್ಕಾಗಿ ಏಳು ಜಿಲ್ಲೆಗಳಾದ ಕೋಲಾರ, ಮಂಡ್ಯ, ತುಮಕೂರು, ಚಿಕ್ಕಮಗಳೂರು, ಗುಲ್ಬರ್ಗಾ, ರಾಯಚೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ತಲಾ 10 ಲಕ್ಷ ರೂಪಾಯಿಗಳ ಅನುದಾನವನ್ನು ಇದಕ್ಕಾಗಿ ಒದಗಿಸಿದ್ದು, ಉಳಿದ ಎಂಟು ಜಿಲ್ಲೆಗಳಾದ ಬೆಳಗಾವಿ, ಬೀದರ್, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಉಡುಪಿ, ಉತ್ತರ ಕನ್ನಡ ಮತ್ತು ಬೆಂಗಳೂರು ನಗರ ಜಿಲ್ಲೆಗಳಿಗೆ ತಲಾ 10 ಲಕ್ಷ ರೂಪಾಯಿಗಳ ಅನುದಾನವನ್ನು ಕೇಂದ್ರದಿಂದ ನಿರೀಕ್ಷಿಸುತ್ತಿದ್ದೇವೆ. ಈ ಯೋಜನೆಯಡಿಯಲ್ಲಿ ಒಂದು ಕೌಟುಂಬಿಕ ಶೌಚಾಲಯ ಘಟಕದ ನಿರ್ಮಾಣಕ್ಕೆ 625 ರೂಪಾಯಿಗಳು ಮಾತ್ರ ನಿಗದಿಯಾಗಿದೆ. ಈ 625 ರೂಪಾಯಿಗಳು ಸಾಕಾಗುವುದಿಲ್ಲವೆಂಬ ಕಾರಣಕ್ಕಾಗಿ ಅಂತಹ ಘಟಕವೊಂದಕ್ಕೆ 375 ರೂಪಾಯಿಗಳನ್ನು ಮಾತ್ರ ಸಹಾಯಧನವನ್ನಾಗಿ ನೀಡಿ, ಉಳಿದ 250 ರೂಪಾಯಿಗಳನ್ನು ರಾಜ್ಯ ಸರ್ಕಾರ ನೀಡಬೇಕಾಗಿದೆ. ಇದರಿಂದ 625 ರೂಪಾಯಿಗಳಲ್ಲಿ ಶೌಚಾಲಯ ಕಟ್ಟಡ ಕಟ್ಟಲು ಸಾಧ್ಯವಾಗುವುದಿಲ್ಲ. ಅದಕ್ಕೆ ಬೇರೆ ರೀತಿಯಾದ ಯೋಜನೆಗಳನ್ನು ನಾವು ತಯಾರಿಸಬೇಕಾಗುತ್ತದೆ. ಆ ದೃಷ್ಟಿಯಿಂದ ಕೌಟುಂಬಿಕ ಶೌಚಾಲಯಗಳನ್ನು ನಿರ್ಮಿಸಲು ನೀರಿನ ಕೊರತೆ ಒಂದು ಕಾರಣವಾದರೆ, ಜಾಗದ ಕೊರತೆ ಮತ್ತು ಅನೇಕ ಕಡೆಗಳಲ್ಲಿ 'ನಿರ್ಮಲ ಕರ್ನಾಟಕ ಯೋಜನೆ'ಯಡಿ ತೆಗೆದುಕೊಂಡ ಶೌಚಾಲಯ ನಿರ್ಮಾಣ ಕಾರ್ಯ ವಿಫಲವಾಗಿರುವುದೂ ಒಂದು ಕಾರಣವಾಗಿದೆ. 'ಸ್ವಚ್ಛ ಗ್ರಾಮ'ವೆಂದು ಯಾವುದನ್ನು ನಾವು ತಯಾರಿಸಿದೆವು, ಆ ಸ್ವಚ್ಛ ಗ್ರಾಮಗಳಿಗೆ ಸಂಬಂಧಿಸಿದಂತೆ ನಾವು 9.75 ಲಕ್ಷಕ್ಕೂ ಮೀರಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛ ಗ್ರಾಮದ ಆಧಾರದಲ್ಲಿ ಕೌಟುಂಬಿಕ ಶೌಚಾಲಯಗಳನ್ನು ನಿರ್ಮಿಸಿದ್ದೇವೆ. ಆದರೆ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಯಡಿ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದವರೂ ಕೂಡ 6.4 ಲಕ್ಷ ಕೌಟುಂಬಿಕ ಶೌಚಾಲಯಗಳನ್ನು ನಿರ್ಮಿಸಿದ್ದಾರೆ. ಅನೇಕ ಕಡೆಗಳಲ್ಲಿ ಸಾಮೂಹಿಕ ಶೌಚಾಲಯಗಳ ಬಗ್ಗೆ ಬೇಡಿಕೆ ಇದೆ. ಅದಕ್ಕೆ ಹೆಚ್ಚು ನೀರಿನ ಸೌಲಭ್ಯ ಒದಗಿಸಿಕೊಟ್ಟಾಗ ಮಾತ್ರ ಸಾಮೂಹಿಕ ಶೌಚಾಲಯಗಳು ಉಪಯುಕ್ತವಾಗುತ್ತದೆ. ಇಲ್ಲದಿದ್ದರೆ, ತುಂಬಾ ದುರ್ವಾಸನೆಗೊಳಗಾಗಿ ಉಪಯೋಗಕ್ಕೆ ಅನರ್ಹವಾಗುತ್ತವೆ. ಈ ಎಲ್ಲಾ ದೃಷ್ಟಿಕೋನಗಳಿಂದ ನೀವು ಹೇಳಿದಂತೆ ಒಳ್ಳೆಯ ಪ್ರಗತಿಯಾಗಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಇದಕ್ಕೆ ಹೆಚ್ಚಿನ ಅನುದಾನ ಕೊಡಬೇಕಾದಂಥ ಅಗತ್ಯತೆ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಿಗೆ ಕಷ್ಟವೇನೆಂದು ಅರ್ಥವಾಗಿರುವುದರಿಂದ ನಾನು ಅವರನ್ನು ಅಭಿನಂದಿಸಲಿಚ್ಛಿಸುತ್ತೇನೆ. ಗ್ರಾಮೀಣ ಪ್ರದೇಶಗಳಲ್ಲಿ ಶೌಚಕ್ಕೆಂದು ಹೆಣ್ಣುಮಕ್ಕಳು ಸೂರ್ಯ ಹುಟ್ಟುವುದಕ್ಕೆ ಮುಂಚೆ ಮರಗಳ ಮರೆಯಲ್ಲಿ ಶೌಚ ಕಾರ್ಯ ಮುಗಿಸುವ ಪರಿಸ್ಥಿತಿ ಅಥವಾ ಸೂರ್ಯ ಮುಳುಗಿದ ಬಳಿಕ ಶೌಚಕ್ಕೆ ಹೊರಗಡೆ ಹೋಗುವ

ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ರಾಜ್ಯ ಸರ್ಕಾರ ತಕ್ಷಣ ಗಮನಹರಿಸಿ, ಈ ದಿಶೆಯಲ್ಲಿ ಕೇಂದ್ರ ಸರ್ಕಾರವನ್ನು ಕಾಯದೆ ವಿಶೇಷ ಯೋಜನೆಯೊಂದನ್ನು ತಾವು ತಯಾರಿಸಿ ಹಣ ಬಿಡುಗಡೆ ಮಾಡುತ್ತೀರಾ ಎನ್ನುವ ಪ್ರಶ್ನೆಯನ್ನು ಅಧ್ಯಕ್ಷರ ಮೂಲಕ ತಮ್ಮಲ್ಲಿ ಕೇಳಬಯಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಹಿಂದಿನ ಕೇಂದ್ರ ಸರ್ಕಾರ ಈ ವಿಚಾರದಲ್ಲಿ ಸ್ಪಂದಿಸಿಲ್ಲ. ಈಗಿನ ಕೇಂದ್ರ ಸರ್ಕಾರ ಸ್ಪಂದಿಸುತ್ತದೆಂದು ಅವರು ದಾರಿ ಕಾಯುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ನಿಜವಾಗಿಯೂ ಕೂಡ ಇದು ಅವಮಾನದ ಸಂಗತಿಯಾಗಿದೆ. ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶಗಳಲ್ಲಿರುವ ಮಹಿಳೆಯರ ದೊಡ್ಡ ಗೋಳಾಟ ಮತ್ತು ತೊಂದರೆಯೇನೆಂದು ಎಲ್ಲರಿಗೂ ಅರ್ಥವಾಗುತ್ತದೆ. 'ನಿರ್ಮಲ ಕರ್ನಾಟಕ ಯೋಜನೆ' ಜಾರಿ ಸಂದರ್ಭದಲ್ಲಿ ಶೌಚಾಲಯಗಳ ಕುರಿತು ಅರಿವು ಮೂಡಿಸುವ ಸಲುವಾಗಿ ಪದ್ಯ ಬರೆದು ರಾಗ ಸಂಯೋಜಿಸಲು ಬಹಳ ಮುಖ್ಯರಾದ ಕನ್ನಡದ ಕವಿಗಳಿಗೆ, ನಾನು ಅವರ ಹೆಸರನ್ನು ಪ್ರಸ್ತಾಪಿಸುವುದಿಲ್ಲ. ಅವರಿಗೆ ಈ ಜವಾಬ್ದಾರಿ ವಹಿಸಿಕೊಟ್ಟಿದ್ದೆವು.

12.20 ಪಿ ಎಂ

ಆದರೆ ಅವರು ಒಂದು ವಾರವಾದ ಮೇಲೆ ಶೌಚಾಲಯದ ಬಗ್ಗೆ ಯಾವ ರೀತಿಯಲ್ಲಿ ಕವನ ಬರೆಯಬೇಕು. ಅದು ನಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಹೇಳಿದರು. ಒಬ್ಬ ಖ್ಯಾತ ಸಂಗೀತ ತಜ್ಞನಿಗೂ ಇದರ ಜವಾಬ್ದಾರಿಯನ್ನು ಕೊಟ್ಟೆವು. ಅವರೂ ಇದಕ್ಕೆಲ್ಲ ಮಾಡಲು ಆಗುವುದಿಲ್ಲ. ಶೌಚಾಲಯ ಇದೆಲ್ಲಾ ವಿಚಾರವೇನು ಎಂಬ ಪ್ರಶ್ನೆ ಬಂತು. ಅದಾದಮೇಲೆ ಪಿಚ್ಚಳ್ಳಿ ಶ್ರೀನಿವಾಸ್ ಎಂದು ಹೇಳಿ ಒಬ್ಬ ಗದ್ದರ್ ಗ್ರೂಪ್‌ನಲ್ಲಿರತಕ್ಕ ನವ ಕವಿ ಮತ್ತು ಹೋರಾಟಗಾರ, ಅವರಿಗೆ ಈ ಜವಾಬ್ದಾರಿಯನ್ನು ವಹಿಸಿಕೊಟ್ಟರೆ ಮೂರೇ ದಿವಸಗಳಲ್ಲಿ ಮಾಡಿದರು. ಜನಾರ್ದನ ಎಂದು ಮೈಸೂರಿನ ರಂಗಾಯಣದಲ್ಲಿದ್ದಾರೆ, ಅವರು ಪರಿಶಿಷ್ಟ ವರ್ಗದಿಂದ ಬಂದಿರತಕ್ಕವರಾಗಿರುವುದರಿಂದ ಆತನಿಗೆ ನೋವು ಗೊತ್ತಿದ್ದರಿಂದ ಆತ ಅದಕ್ಕೆ ಒಳ್ಳೆಯ ಕಂಪೋಸ್ ಮಾಡಿರತಕ್ಕ ಹಾಡುಗಳನ್ನು ಮಾಡಿಕೊಟ್ಟ. ಈ ಅರಿವನ್ನು ಮೂಡಿಸತಕ್ಕದ್ದು. ನಮಗೇ ಇದು ಅಪಮಾನಾಕಾರಿಯಾದಂಥ ವಿಚಾರ, ತಾವು ಎತ್ತಿರತಕ್ಕದ್ದು ಬಹಳ ಮುಖ್ಯವಾದದ್ದು. ಇದನ್ನು ಖಂಡಿತವಾಗಿ ಮಾಡಲೇ ಬೇಕಾಗಿರತಕ್ಕದ್ದು.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಸ್ವಾತಂತ್ರ್ಯ ಬಂದು ಸುಮಾರು 53–54 ವರ್ಷಗಳಾದರೂ ಹೆಣ್ಣುಮಕ್ಕಳಿಗೆ ಸ್ವಾತಂತ್ರ್ಯ ಇಲ್ಲ. ಹಗಲೊತ್ತು ಎಲ್ಲೂ ಹೋಗುವ ಪ್ರಶ್ನೆಯೇ ಇಲ್ಲ. ಸಂಜೆಯಾಯಿತು ಎಂದರೆ ಬೇಲಿ ಪಕ್ಕದಲ್ಲಿ ಹೋಗುತ್ತಾರೆ. ಯಾವುದೇ ಹಳ್ಳಿಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದೆಯೆ, ನೀರಿನ ವ್ಯವಸ್ಥೆ ಇಲ್ಲದೆ ನೀವು ಶೌಚಾಲಯ ಮಾಡಲು ಹೊರಟರೆ ಅದು ಸಂಪೂರ್ಣವಾಗಿ ವಿಫಲವಾಗುತ್ತದೆ. ಒಂದು ಹಳ್ಳಿಗೆ ಕನಿಷ್ಠ ನಾಲ್ಕು ಕಡೆಯಾದರೂ ನಾಲ್ಕು ಶೌಚಾಲಯವನ್ನು ಮಾಡಬೇಕು. ಆ ರೀತಿ ಮಾಡಿದ ತಕ್ಷಣ ಪ್ರತಿಯೊಂದರಲ್ಲೂ ನೀರಿನ ವ್ಯವಸ್ಥೆ ಮಾಡಬೇಕು. ನೀರಿನ ವ್ಯವಸ್ಥೆ ಇಲ್ಲದಿದ್ದರೆ ಅದು ಇನ್ನೂ ಹೊಲಸಾಗುತ್ತದೆ. ಅದು ನಿರ್ಮಲ ಕರ್ನಾಟಕವಲ್ಲ; ಕೊಳಚೆ ಕರ್ನಾಟಕವಾಗಿ ಹೋಗುತ್ತದೆ, ಅದರ ಬಗ್ಗೆ ಸ್ವಲ್ಪ ಎಚ್ಚರವಿರಲಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇದನ್ನು ಯಾವಾಗ ಪ್ರಾರಂಭ ಮಾಡುತ್ತೇವೆಂದು ಹೇಳಿಬಿಟ್ಟರೆ ಇಡೀ ರಾಜ್ಯದ ಜನ ಕಾಯುತ್ತಿರುತ್ತಾರೆ. ತಾವು ಏನು ಮಾಡುತ್ತೀರಿ ಎಂಬುದು ಬೇಕಷ್ಟೆ.

ಶ್ರೀ ವಾಟಾಳ್‌ನಾಗರಾಜ್ : ಅದರ ಬಗ್ಗೆ ತಾವು ಏನು ಮಾಡುತ್ತೀರಿ ಹೇಳಿ.

ಶ್ರೀಮತಿ ಟಿ. ಭಾಗೀರಥಿ ಮರುಳಸಿದ್ದನಗೌಡ : ಮಾನ್ಯ ಅಧ್ಯಕ್ಷರೆ, ಶೌಚಾಲಯಗಳ ನಿರ್ಮಾಣದ ವಿಚಾರದಲ್ಲಿ ಸ್ತ್ರೀಶಕ್ತಿ ಗುಂಪಿನವರನ್ನು ಮೊದಲನೆ ಆದ್ಯತೆಯಾಗಿ 125 ರೂಪಾಯಿಗಳನ್ನು ಗ್ರಾಮಪಂಚಾಯಿತಿಯಲ್ಲಿ ಕಟ್ಟಿ ನೋಂದಣಿ ಮಾಡಿ ಎರಡೂವರೆ ಸಾವಿರ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಇದನ್ನು ನಿರ್ಮಾಣ ಮಾಡಬೇಕೆಂದು ಏನು ತೀರ್ಮಾನವನ್ನು ತೆಗೆದುಕೊಂಡಿದ್ದರು, ಆದರೆ ಈಗ ಕೇಂದ್ರ ಸರ್ಕಾರದ್ದು ಮತ್ತು ರಾಜ್ಯ ಸರ್ಕಾರದ್ದು ಸಬ್ಸಿಡಿ ಕಡಿಮೆಯಾಗಿರುವುದರಿಂದ ಅದು ನಮಗೆ ಬೇಡ, ಆ 125 ರೂಪಾಯಿ ವಾಪಸ್ ಕೊಡಿ ಎನ್ನತಕ್ಕ ಮಾತನ್ನು ಮಹಿಳೆಯರು ನಮ್ಮ ಮುಂದಿಟ್ಟಿದ್ದಾರೆ. ಇದಕ್ಕೆ ಏನಾದರೂ ಬೇರೆ ರೀತಿಯ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆಯೇ ಎನ್ನುವುದನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಬಹಳ ಉತ್ತಮವಾದ ಸಲಹೆ. ಈಗಾಗಲೇ ಕೇಂದ್ರ ಸರ್ಕಾರ ರೂಪಿಸಿರತಕ್ಕ ಯೋಜನೆಯಲ್ಲಿ ಕೇಂದ್ರದ್ದು ಕೇವಲ 325 ರೂಪಾಯಿ, ನಮ್ಮದು 125 ರೂಪಾಯಿ, ಆದ್ದರಿಂದ 625ಕ್ಕೆ ಒಂದು ಶೌಚಾಲಯ ನಿರ್ಮಾಣ ಮಾಡಿ ಎಂದರೆ ಆಗುವುದಿಲ್ಲ. ಇದಕ್ಕೆ ಮಹಾತ್ಮಾ ಗಾಂಧಿ ರೂರಲ್ ಡೆವಲಪ್‌ಮೆಂಟ್ ಎಂದು ಒಂದು ಎನ್.ಜಿ.ಓಸ್. ನವರೊಬ್ಬರು ಮಾಡುತ್ತಿದ್ದಾರೆ. ಸಿರಿಗೇರಿ ಮಠದವರು ಮಾಡುತ್ತಿದ್ದಾರೆ. ಧರ್ಮಸ್ಥಳದ ವೀರೇಂದ್ರ ಹೆಗಡೆಯವರು ಮಾಡುತ್ತಿದ್ದಾರೆ, ಜೆ.ಎಸ್.ಎಸ್. ನವರು ಮಾಡುತ್ತಿದ್ದಾರೆ, ಸರ್ಕಾರದ ಅನುದಾನವನ್ನು ತೆಗೆದುಕೊಂಡು ಆಯಾಯ ಆಯ್ದ ಗ್ರಾಮಗಳಲ್ಲಿ ಉತ್ತಮವಾದ ಶೌಚಾಲಯಗಳನ್ನು ಕಟ್ಟಿರತಕ್ಕದ್ದು ಇದೆ. ಒಂದು ಶೌಚಾಲಯಕ್ಕೆ ಕನಿಷ್ಠ ಮೂರು ಸಾವಿರ ರೂಪಾಯಿ ಮಾಡಬೇಕೆಂಬ ಬಗ್ಗೆ ಯೋಜನೆ ಮಾಡಬೇಕು. ಧನಸಹಾಯ ಸಂಪೂರ್ಣವಾಗಿ ಕಡಿಮೆಯಾಗಿರುವುದರಿಂದ ಈ ಗೊಂದಲವಾಗಿದೆ, ಸ್ತ್ರೀಶಕ್ತಿ ಗುಂಪಿನವರು ನಮ್ಮ 125 ರೂಪಾಯಿಗಳನ್ನು ವಾಪಸ್ ಕೊಡಿ ಎಂದು ಹೇಳತಕ್ಕದ್ದು ನ್ಯಾಯಯುತವಾದಂಥ ಬೇಡಿಕೆಯಾಗಿದೆ. ಏಕೆಂದರೆ ನಾವು 625 ರೂಪಾಯಿ ಹಣವನ್ನು ಕೊಟ್ಟರೆ ಅದರಿಂದ ಏನೂ ಆಗುವುದಿಲ್ಲವೆಂದು ಗೊತ್ತು. ತಾವು ಹೇಳಿದಂತೆ ಶೌಚಾಲಯಗಳ ನಿರ್ಮಾಣದಲ್ಲಿ ನೀರು ಇಲ್ಲದಿದ್ದರೆ, ಭಾರತ ಸರ್ಕಾರ 500 ರೂಪಾಯಿಗಳ ಸಹಾಯಧನವನ್ನು ಮಾತ್ರ ಹೇಳಿದರೆ. ಉಳಿದ ಹಣವನ್ನು ಫಲಾನುಭವಿಗಳು ಹಾಕಬೇಕೆಂದು ಹೇಳುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿಗಳನ್ನು ಕಣ್ಣಿನಿಂದ ನೋಡಬೇಕಾದದ್ದು ಇಲ್ಲ. ನಾವು ಯಾವುದಾದರೂ ಊರಿಗೆ ಹೋಗಬೇಕಾಗಿದ್ದರೆ ನಿಮ್ಮದೊಂದು ಮೂಗು ಇದ್ದರೆ ಸಾಕು, ಎಲ್ಲಾದರೂ ದುರ್ವಾಸನೆ ಬಂತು ಎಂದರೆ ಅಲ್ಲಿ ಒಂದು ಜನವಸತಿ ಇದೆಯೆಂದು ನಾವು ತಿಳಿದುಕೊಳ್ಳಬೇಕು. ತಮಗೆ ಗೊತ್ತಿದ್ದಂತೆ ತಾವು ಒಪ್ಪಿಕೊಳ್ಳುವುದಾಗಿದ್ದರೆ ಬಹಳ ಹಳೆಯದಾದಂಥ ಹಾಸ್ಯದ ಮಾತೊಂದು ಇದೆ. ಇದು ಹಾಸ್ಯ. ಬ್ರಿಜ್ನೇವ್ ಮತ್ತು ಕ್ರೊಶೋವ್‌ರವರು ನೆಹರುರವರು ಇದ್ದಂಥ ಸಂದರ್ಭದಲ್ಲಿ ಭಾರತ ದೇಶಕ್ಕೆ ಬಂದಾಗ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಸಿ.ಡಿ. ಪ್ಲಾನ್‌ನಲ್ಲಿ ಏನೆಲ್ಲಾ ಚಟುವಟಿಕೆಗಳನ್ನು ಮಾಡಿದ್ದೇವೆ ಎಂದು ಹೇಳಿ ದೆಹಲಿಯ ಪಕ್ಕದ ಕೆಲವು ಹಳ್ಳಿಗಳಿಗೆ ಹೋಗಿರುತ್ತಾರೆ, ಅವರು ವಾಪಸ್ ಬರುವಾಗ ರಾತ್ರಿಯಾಗಿರುತ್ತದೆ. ರಾತ್ರಿ ಆ ಹೆಡ್ ಲೈಟನ್ನು ಹಾಕಿಕೊಂಡು ಬರುವಂಥ ಸಂದರ್ಭದಲ್ಲಿ ಬಹಳ ಜನ ಸಾಲಾಗಿ ಕುಳಿತಿರತಕ್ಕದ್ದನ್ನು ನೋಡುತ್ತಾರೆ. ಕ್ರೊಶೋವ್ ಮತ್ತು ಬ್ರಿಜ್ನೇವ್‌ರವರು ನೆಹರುರವರನ್ನು ಏನಿದು ಈ ಜನರು ಸಾಲಾಗಿ ಕುಳಿತಿದ್ದಾರೆಂದು ಕೇಳುತ್ತಾರೆ, ನೆಹರುರವರಿಗೆ ಬಹಳ ಅಪಮಾನವಾಗುತ್ತದೆ,

ಹೇಳಲಾರರು ಮತ್ತು ಹೇಳದೆಯೂ ಇರಲಾರರು, ಇಲ್ಲಾ, ಇಲ್ಲಾ ಈ ತರದಲ್ಲಾಗಿದೆ, ನಮ್ಮಲ್ಲಿ ಶೌಚಾಲಯಗಳ ಕೊರತೆಯಿಂದ ಭಹಿರ್ದೆಸೆಗೆ ಯಾವಾಗಲೂ ಬಯಲಿಗೆ ಹೋಗುತ್ತಾರೆ ಎನ್ನತಕ್ಕ ಮಾತನ್ನು ನೆಹರುರವರು ಹೇಳುತ್ತಾರೆ. ಅದಕ್ಕೆ ಕ್ರೊಶೋವ್‌ರವರು ನಮ್ಮ ದೇಶದಲ್ಲಾಗಿದ್ದರೆ ಅವರನ್ನು ಗುಂಡು ಇಟ್ಟು ಕೊಲ್ಲುತ್ತಿದ್ದೆ ಎಂದು ಹೇಳುತ್ತಾರೆ. ಅದಾದ ಸ್ವಲ್ಪ ವರ್ಷಗಳ ನಂತರ ನೆಹರುರವರು ಮಾಸ್ಕೋಗೆ ಹೋಗುತ್ತಾರೆ. ಇದು ಒಂದು ಜೋಕು. ಆದರೆ ಅದು ನಿಜವಾದಂಥ ನಮ್ಮ ವಸ್ತುಸ್ಥಿತಿಯನ್ನು ಹೇಳುವಂಥದ್ದು. ಮಾಸ್ಕೋಕ್ಕೆ ಹೋದಾಗ ಅಲ್ಲಿ ಅವರಿಗೂ ಪ್ರಗತಿಪರವಾದಂಥ ಕೆಲಸ ಮಾಡಿದ್ದನ್ನು ತೋರಿಸಿ ವಾಪಸ್ ಬರುವಾಗ ಒಂದಿಬ್ಬರು ಅಲ್ಲಿ ಸಾಲಾಗಿ ರಸ್ತೆಬದಿಯಲ್ಲಿ ಕುಳಿತಿರುತ್ತಾರೆ. ಆಗ ನೆಹರುರವರಿಗೆ ಬಹಳ ಖುಷಿಯಾಗುತ್ತದೆ, ಇಲ್ಲೂ ಹೀಗೆಯೇ ನಡೆಯುತ್ತಿದೆಯಲ್ಲಾ ಎಂದು, ಇದೇನಿದು ಹೀಗೆ ಕುಳಿತಿದ್ದಾರಲ್ಲಾ ಎಂದು ಕೇಳುತ್ತಾರೆ, ಆಗ ಅವರು ನನಗೂ ಬಹಳ ಅಪಮಾನವಾಯಿತು, ಆಗಲಿ ಅವರನ್ನು ಹಿಡಿಸಿತರಿಸುತ್ತೇನೆಂದು ಹೇಳಿದ್ದರಿಂದ ಅವರನ್ನು ಹಿಡಿಸುತ್ತಾರೆ, ಆದರೆ ಅವರಿಬ್ಬರೂ ಭಾರತೀಯರಾಗಿರುತ್ತಾರೆ, ಆದ್ದರಿಂದ.....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಒಳ್ಳೆ ಜೋಕನ್ನೇನೋ ಹೇಳುತ್ತೀರಿ, ಆದರೆ ಇದಕ್ಕೆ ಪರಿಹಾರವೇನು?

ಶ್ರೀ ವಾಟಾಳ್‌ನಾಗರಾಜ್ : ಹಳ್ಳಿಗಳಲ್ಲಿ ಒಂದು ಶೌಚಾಲಯವೆಂದರೆ, ಇವರ ಯೋಜನೆ ಏನೆಂದರೆ, ಎರಡು ಕಲ್ಲು ಇಲ್ಲದಿದ್ದರೆ ಎರಡು ಇಟ್ಟಿಗೆ, ಒಂದೆರಡು ಅಡಿ ಹಳ್ಳ, ಮುಗಿದೇ ಹೋಯಿತು, ಇದು ಶೌಚಾಲಯ, ಇದು ಎಲ್ಲಾದರೂ ಉಂಟೆ? ನೀರು ಇಲ್ಲ, ಬರಗಾಲದಲ್ಲಿ ಗಂಡಸರಿಗಾದರೂ ಕೆರೆಗಳಲ್ಲಿ ನೀರು ಇರುತ್ತಿತ್ತು ಹೋಗುತ್ತಿದ್ದರು, ಆದರೆ ಕಳಪೆ ಮೂರು ವರ್ಷ ಕೆರೆಯಲ್ಲಿ ನೀರು ಇಲ್ಲದೆ ಅವರ ಹಣೆಬರಹ ದೇವರೇ ಕಾಪಾಡಬೇಕು, ಆ ಪರಿಸ್ಥಿತಿ, ಅವರು ಎಲ್ಲಿ ಹೋದರೋ, ಎಲ್ಲಿ ನೀರನ್ನು ತಂದರೋ, ಇದರ ಬಗ್ಗೆ ದೀರ್ಘವಾಗಿ ನಾವು ಯೋಚನೆ ಮಾಡಲು ಹೋದರೆ ಇದು ಆಗದೇ ಇರಬಹುದು. ಆದರೆ ವಸ್ತುಸ್ಥಿತಿ ನಿಜಕ್ಕೂ ಅತ್ಯಂತ ನರಕ, ಹೆಣ್ಣುಮಕ್ಕಳಿಗೆ ಅತ್ಯಂತ ನರಕ, ಈ ಬಗ್ಗೆ ಇವರ ಸರ್ಕಾರ ಆಯವ್ಯಯದಲ್ಲೇನೂ ಹಣವನ್ನು ಒದಗಿಸಲಿಲ್ಲ. ಮುಂದೆ ಏನು ಮಾಡಬೇಕೆಂದು ಇಲ್ಲ, 500 ರೂಪಾಯಿಗೆ ಏನು ಮಾಡಲು ಸಾಧ್ಯ? ನಾಲ್ಕು ಇಟ್ಟಿಗೆ ಸ್ವಲ್ಪ ಸಿಮೆಂಟ್ ಇದನ್ನು ಇಟ್ಟರೆ ಇದು ಶೌಚಾಲಯ, ಇದು ಸಾಧ್ಯವೇ? ನಮ್ಮ ಪಟ್ಟಣ ಪ್ರದೇಶಗಳಲ್ಲಿ ಎಂತೆಂಥ ಶೌಚಾಲಯಗಳಿವೆ, ಏನೇನು ನಾವು ಮಾಡುತ್ತಿದ್ದೇವೆ, ಹಳ್ಳಿಗಾಡಿನ ಜನರಿಗೆ ಅದರಲ್ಲೂ ಹೆಣ್ಣುಮಕ್ಕಳಿಗೆ ಎಷ್ಟು ಅನ್ಯಾಯ ಮಾಡುತ್ತಿದ್ದೇವೆ, ದಯಮಾಡಿ ತಾವು ಇದರ ಬಗ್ಗೆ ಸ್ಪಷ್ಟವಾದಂಥ ನಿಲುವನ್ನು ಹೇಳಬೇಕೆಂದು ತಮ್ಮ ಮೂಲಕ ಅವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

Sri S. Rajendran : Atleast you think over it to provide free napkins for them. Foreign style ನಲ್ಲಾದರೂ ಮಾಡಿ ಈ ನ್ಯಾಪ್‌ಕೀನ್ ಆದರೂ ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಮ್ಮ ನಿಮ್ಮ ಹೆಣ್ಣುಮಕ್ಕಳಂತೆ ನಮ್ಮ ಹಳ್ಳಿಯ ಹೆಣ್ಣುಮಕ್ಕಳು ಎಂದು ಯೋಚನೆ ಮಾಡುವ ದಿನ ಬರಲಿಲ್ಲವೆಂದರೆ ಯಾವ ಸರ್ಕಾರವೂ ಇದರ ಬಗ್ಗೆ ಗಮನಕೊಡುವುದಿಲ್ಲ. ನಮ್ಮ ಮನೆ ಮತ್ತು ನಿಮ್ಮ ಮನೆಯ ಹೆಣ್ಣುಮಕ್ಕಳನ್ನು ಇಟ್ಟಿರುವ ರೂಪದಲ್ಲಿ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು ರಸ್ತೆಯಲ್ಲಿ ಕುಳಿತಾಗ ನಿಮಗೆ ನೋವಾಗುತ್ತದೆ ಎಂಬ ಸ್ಥಿತಿಗೆ

ತಾವು ಬರಲಿಲ್ಲವೆಂದರೆ ಇದಕ್ಕೆ ಉತ್ತರ ಸಿಗುವುದಿಲ್ಲ. ದಯವಿಟ್ಟು ಈ ಸಂದರ್ಭದಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತೀರಿ ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ತಾವು ಈಗ ಏನು ಶೌಚಾಲಯದ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದೀರಿ ಇದೆಲ್ಲಾ ಅಕ್ಷರಶಃ ನಿಜ. ಸ್ವಾತಂತ್ರ್ಯ ಬಂದು 53–54 ವರ್ಷಗಳ ನಂತರವೂ ಈ ಸಮಸ್ಯೆಯನ್ನು ಬಗೆಹರಿಸದಿರತಕ್ಕದ್ದು ನಮಗೆ ಅಪಮಾನದ ಸಂಗತಿ. ಆದರೆ ಈ ಸಲ 381.32 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ, ಕೇಂದ್ರ ಸರ್ಕಾರದ ಅನುಮೋದನೆ ಬಂದ ತಕ್ಷಣವೇ ಆ ಕಾರ್ಯಕ್ರಮವನ್ನು ವ್ಯಾಪಕವಾಗಿ ಮಾಡುತ್ತೇವೆ. ಮತ್ತು ಈ ವಿಚಾರದಲ್ಲಿ ಅರ್ಧ ಗಂಟೆ ಚರ್ಚೆಯಾಗಲಿ.

ಶ್ರೀ ಕೆ.ಎಸ್. ಈಶ್ವರಪ್ಪ : ಚರ್ಚೆ ತೆಗೆದುಕೊಂಡು ಏನು ಮಾಡುತ್ತೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಆ 381 ಕೋಟಿ ರೂ. ಬಿಡುಗಡೆ ಮಾಡಲು ಏನಾದರೂ ಒತ್ತಾಯ ಮಾಡಿದ್ದೀರಾ?

ಶ್ರೀ ಎಂ.ಪಿ. ಪ್ರಕಾಶ್ : ಇದು ಬಹಳ ಪ್ರಮುಖವಾದ ಪ್ರಶ್ನೆಯಾಗಿದ್ದರಿಂದ, ಇದನ್ನು ಕೇಂದ್ರ ಸರ್ಕಾರಕ್ಕೆ ನಾವು ಕಳಿಸಿಕೊಟ್ಟಿದ್ದೇವೆ. ಆದ್ದರಿಂದ ಅನುದಾನವನ್ನು ಹೆಚ್ಚು ಮಾಡತಕ್ಕದನ್ನು ಮಾಡುತ್ತೇವೆ.

ಶ್ರೀ ವಾಟಾಳ್‌ನಾಗರಾಜ್ : ಕೇಂದ್ರ ಸರ್ಕಾರದಿಂದ ಅದು ಬರುವವರೆಗೆ ಯಾರೂ ಹೆಣ್ಣುಮಕ್ಕಳು ಶೌಚಾಲಯಕ್ಕೆ ಹೋಗಬಾರದು.

ಅಧ್ಯಕ್ಷರು : ಮಾನ್ಯ ವಾಟಾಳ್‌ನಾಗರಾಜ್‌ರವರೇ, ನಾನು ಎಷ್ಟು ಗಂಟೆಗಳ ಕಾಲ ಪ್ರಶ್ನೋತ್ತರ ಕಾಲವನ್ನು ನಡೆಸಬೇಕು ಎಂದು ನಿರ್ಣಯ ಮಾಡಿಬಿಡಿ. ಈಗಾಗಲೇ ಎರಡು ಗಂಟೆಯಾಗಿದೆ. ನಾನು ಏನೋ ಅಂದರೆ, ಅದಕ್ಕೂ ನಿಯಮಾವಳಿಗಳು ಇರುತ್ತದೆ. ಪರಿಸ್ಥಿತಿಯನ್ನು ಯಾರೂ ಅರ್ಥ ಮಾಡಿಕೊಳ್ಳದಿದ್ದರೆ ಹೇಗೆ?

(ಗೊಂದಲ)

ಈ ರೀತಿಯಾದರೆ ಸದನವನ್ನು ನಾನು ನಡೆಸಲು ಆಗುವುದಿಲ್ಲ.

ಶ್ರೀ ಬಸವರಾಜ್ ರಾಯರೆಡ್ಡಿ : ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳಲು ಅವರು ಸಿದ್ಧರಾಗಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅರ್ಧಗಂಟೆ ಚರ್ಚೆ ಬೇಡ ಸ್ವಾಮಿ, ದಯಮಾಡಿ ತಾವು ಬೇಕಾದರೆ ದಾಖಲೆಗಳನ್ನು ತೆಗೆದು ನೋಡಿ. ಕೇಂದ್ರ ಸರ್ಕಾರದಿಂದ ಈ 381.35 ಕೋಟಿ ಅಂದಾಜಿನ ಸಮಗ್ರ ಯೋಜನೆಯೊಂದು ಏನಿದೆ ಇದರ ಬಗ್ಗೆ ಹಣವನ್ನು ಬಿಡುಗಡೆ ಮಾಡಲು ಒತ್ತಾಯ ಮಾಡಿ. ಆದರೆ ಇದು ಬಡವರಿಗೆ ಸಂಬಂಧಪಟ್ಟಿದ್ದು ಎಂದು ಯಾರೂ ಇದರ ಬಗ್ಗೆ ಗಮನ ಕೊಡುವುದಿಲ್ಲ. ಆದ್ದರಿಂದ ತಾವು ಬೇರೆಯದಕ್ಕೆ ಹೇಗೆ ಹೆಚ್ಚು ಮಹತ್ವ ಕೊಟ್ಟು ಕೇಂದ್ರ ಸರ್ಕಾರಕ್ಕೆ ಹೋಗಿ ಹಣವನ್ನು ಬಿಡುಗಡೆ ಮಾಡಿಸಿಕೊಂಡು ಬರುತ್ತೀರೋ ಅದೇ ರೀತಿ ಇದಕ್ಕೂ

ಆದಷ್ಟು ಬೇಗನೆ ಹಣವನ್ನು ಬಿಡುಗಡೆ ಮಾಡಿಸಿ ದೊಡ್ಡ ಪ್ರಮಾಣದಲ್ಲಿ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದರ ಬಗ್ಗೆ ಯೋಚನೆ ಮಾಡಿ ಇದಕ್ಕೊಂದು ಪರಿಹಾರವನ್ನು ಕೊಡಿ.

ಶ್ರೀ ಎಂ.ಪಿ. ಪ್ರಕಾಶ್ : ಯೋಚನೆ ಮಾಡುವಂತಹ ಪ್ರಶ್ನೆಯೇ ಇಲ್ಲ. ಆಯವ್ಯಯದಲ್ಲಿ ಇದಕ್ಕೆ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಕೊಟ್ಟಿದ್ದೇವೆ.

ಶ್ರೀ ವಾಟಾಳ್‌ನಾಗರಾಜ್ : ಹಣ ಇನ್ನೂ ಬಿಡುಗಡೆಯೇ ಆಗಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಒಂದು ಅಂದಾಜಿನ ಪ್ರಕಾರ ರಾಜ್ಯದಲ್ಲಿ 50 ಲಕ್ಷ ಮನೆಗಳಿವೆ. ಅವುಗಳಿಗೆ ಪ್ರತಿಯೊಂದಕ್ಕೂ ನಾವು 500 ರೂ.ಗಳ ಸಹಾಯಧನವನ್ನು ಕೊಡಬೇಕೆಂದರೆ ಅದಕ್ಕೆ 250 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದಕ್ಕೆ ನಾವು 2000 ರೂ.ಗಳ ಸಹಾಯ ಧನವನ್ನು ಕೊಡಬೇಕೆಂದರೆ 1000 ಕೋಟಿ ರೂ.ಗಳು ಬೇಕಾಗುತ್ತದೆ. ನಮಗೆ ಬೇರೆ ಬೇರೆ ವಿಚಾರಗಳೂ ಕೂಡ ಇರುವುದರಿಂದ, ಯಾವುದು ನಮ್ಮ ಆದ್ಯತೆ ಎಂದಾಗ, ಅದನ್ನು ನಮ್ಮ ಆದ್ಯತೆಯನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. 3 ರೂ.ಗಳಿಗೆ ಒಂದು ಕೆ.ಜಿ. ಅಕ್ಕಿ ಕೊಡತಕ್ಕಂಥದ್ದು ಆದ್ಯತೆ, ಮಕ್ಕಳಿಗೆ ಸಮವಸ್ತ್ರ ಕೊಡತಕ್ಕಂಥದ್ದು ಆದ್ಯತೆ, ಬಿಸಿಯೂಟ ಕೊಡಬೇಕಾದಂತಹದ್ದು ಆದ್ಯತೆ. ಆದರೆ ಬಡತನದ ಮನೆಯಲ್ಲಿ ಯಾವುದನ್ನು ಆದ್ಯತೆಯನ್ನಾಗಿ ಮಾಡಿಕೊಳ್ಳಬೇಕು ಎಂಬುದರ ಮೇಲೆ ಇದು ಅವಲಂಬಿತವಾಗಿದೆ. ಕೇಂದ್ರ ಸರ್ಕಾರ 500 ರೂ.ಗಳನ್ನು ಮಾತ್ರ ಕೊಡುತ್ತದೆ. ಉಳಿದಿರತಕ್ಕಂಥದ್ದನ್ನು ಫಲಾನುಭವಿಗಳು ಭರಿಸಬೇಕು ಎಂದು ಅವರು ಹೇಳಿದ್ದಾರೆ. ಹಾಗೆಂದ ಮಾತ್ರಕ್ಕೆ ನಮ್ಮ ರಾಜ್ಯ ಸರ್ಕಾರ ಶೌಚಾಲಯಗಳ ನಿರ್ಮಾಣದಲ್ಲಿ ಅಲಕ್ಷ್ಯ ಮಾಡುತ್ತದೆ ಎಂದಲ್ಲ. ತಾವು ಹೇಳಿದಂತೆ 381 ಕೋಟಿ ರೂ.ಗಳ ಈ ಯೋಜನೆಯ ಒಪ್ಪಿಗೆಯನ್ನು ಇನ್ನು ಸ್ವಲ್ಪ ದಿವಸಗಳಲ್ಲೇ ತರುತ್ತೇವೆ. ಉಳಿದಿರತಕ್ಕಂಥ ಹಣವನ್ನು ಕೊಟ್ಟು ನಾವು ಕಾರ್ಯಕ್ರಮವನ್ನು ಮಾಡುತ್ತೇವೆ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೇ, ನಾವು ಮುಂದಕ್ಕೆ ಹೋಗೋಣ ಇದೇನಿದು?

ಶ್ರೀ ವಾಟಾಳ್‌ನಾಗರಾಜ್ : ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸಿರುವುದು ಹಾಗಿರಲಿ. ಇದಕ್ಕಾಗಿ ಕರ್ನಾಟಕ ಸರ್ಕಾರ ಎಷ್ಟು ಹಣ ಕೊಡುತ್ತದೆ? ಕರ್ನಾಟಕ ರಾಜ್ಯ ಸರ್ಕಾರ ಈ ರಾಜ್ಯದ ಗ್ರಾಮೀಣ ಮಹಿಳೆಯರ ಶೌಚಾಲಯಗಳಿಗೋಸ್ಕರ ಎಷ್ಟು ಹಣ ಮೀಸಲಾಗಿಟ್ಟಿದೆ?

ಶ್ರೀ ಎಂ.ಪಿ. ಪ್ರಕಾಶ್ : ಈಗ ಸದ್ಯಕ್ಕೆ ಅದರ ಬಗ್ಗೆ ನನ್ನ ಬಳಿ ಮಾಹಿತಿ ಇಲ್ಲದಿರುವುದರಿಂದ ಮುಂದಕ್ಕೆ ಅದಕ್ಕೆ ಉತ್ತರ ಕೊಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ನಾಳೆ ಅದಕ್ಕೆ ಉತ್ತರವನ್ನು ಕೊಡಿಸುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್ : ನಾಳೆಯೇ ಎಂದು ಹೇಳಲಾರೆ. ಮುಂದಕ್ಕೆ ಉತ್ತರ ಕೊಡುತ್ತೇವೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ನಾವು ಮುಂದಕ್ಕೆ ಹೋಗೋಣ. ಈಗ ಶ್ರೀಮತಿ ಸುನಿತ ವೀರಪ್ಪಗೌಡ ಅವರ ತಡೆ ಹಿಡಿಯಲಾದ ಪ್ರಶ್ನೆ.

ಟಿ. ನರಸೀಪುರ ತಾಲ್ಲೂಕಿನಲ್ಲಿ ರಸ್ತೆಗಳ ದುರಸ್ತಿ

35 (170): ಶ್ರೀಮತಿ ಜೆ. ಸುನಿತ ವೀರಪ್ಪ ಗೌಡ (ಬನ್ನೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?